ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ.ಅಸೂ/70/Jt.ಸಿಪಿ(ಸಂ)/2020

ಪೊಲೀಸ್ ಕಮೀಷನರ್‌ರವರ ಕಛೇರಿ.
ನಂ.1, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ.
ದಿನಾಂಕ: 03ನೇ ನವೆಂಬರ್, 2020.

## ಅಧಿಸೂಚನೆ

ಬೆಂಗಳೂರಿನಲ್ಲಿರುವ 95 ಲಕ್ಷಕ್ಕೂ ಹೆಚ್ಚಿನ ವಾಹನಗಳಿಂದಾಗಿ ವಾಯುಮಾಲಿನ್ಯ ಹೆಚ್ಚುತ್ತಿದೆ. ಅದನ್ನು ತಡೆಯಲು ಸೈಕಲ್ ಸವಾರಿ, ಪಾದಚಾರಿಗಳಿಗೆ ಉತ್ತೇಜನ ನೀಡುವಂತಹ ಕ್ರಮಗಳ ಅನುಷ್ಠಾನಕ್ಕೆ ನಗರ ಭೂಸಾರಿಗೆ ನಿರ್ದೇಶನಾಲಯವು ಮುಂದಾಗಿದೆ. ಈ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲು CATAPULT, UK ಸಹಯೋಗದೊಂದಿಗೆ "ಕ್ಲೀನ್ ಏರ್‌ಸ್ಟ್ರೀಟ್" ಪರಿಕಲ್ಪನೆ ಅನುಷ್ಠಾನಕ್ಕೆ ತರಲು ಉದ್ದೇಶಿಸಿದೆ.

ಕ್ಲೀನ್ ಏರ್‌ಸ್ಟ್ರೀಟ್ ಯೋಜನೆ ಅನುಷ್ಠಾನ ಕುರಿತ ಉಪಾಯಗಳು, ವಾಹನಗಳ ಸಂಚಾರ ಸ್ಥಗಿತಗೊಳಿಸುವ ಬಗ್ಗೆ, ಗಾಳಿಯ ಗುಣಮಟ್ಟ ಹೆಚ್ಚಿಸಲು ಯಾವೆಲ್ಲಾ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ಕ್ರಮಕೈಗೊಳ್ಳಬೇಕಿದೆ. ನಗರದ ಕೇಂದ್ರ ಭಾಗದಲ್ಲಿ, ಅದರಲ್ಲೂ ವಾಣಿಜ್ಯ ಚಟುವಟಿಕೆ ಹೆಚ್ಚಿರುವ ರಸ್ತೆಯಲ್ಲಿ ಕ್ಲೀನ್ ಏರ್‌ಸ್ಟ್ರೀಟ್ ಅನುಷ್ಠಾನಕ್ಕೆ ನಿರ್ಧರಿಸಿ ಚರ್ಚ್ ಸ್ಟ್ರೀಟ್ ಅನ್ನು ಆಯ್ಕೆ ಮಾಡಿಕೊಂಡಿದ್ದು ಈ ರಸ್ತೆಯು ಬ್ರಿಗೇಡ್ ರಸ್ತೆಯಿಂದ ಮ್ಯೂಸಿಯಂ ಕ್ರಾಸ್ ರಸ್ತೆಯವರೆಗೆ ಹಾದುಹೋಗಿದ್ದು 715 ಮೀಟರ್ ಉದ್ದದಿಂದ ಹಗೂ 5.5 ಮೀಟರ್ ಅಗಲದಿಂದ ಕೂಡಿರುತ್ತದೆ. ಅಲ್ಲದೆ ಈ ಚರ್ಚ್ ಸ್ಟ್ರೀಟ್ ಟೆಂಡರ್ ಶ್ಯೂರ್ ರಸ್ತೆಯಾಗಿದ್ದು, ವಾಣಿಜ್ಯ ಚಟುವಟಿಕೆ ಹೆಚ್ಚಿನ ಪ್ರಮಾಣದಲ್ಲಿದೆ. ಇಲ್ಲಿ ಪಾದಚಾರಿಗಳ ಓಡಾಟವೂ ಹೆಚ್ಚಿದೆ. ಹೀಗಾಗಿ ಕ್ಲೀನ್ ಏರ್‌ಸ್ಟ್ರೀಟ್ ಪರಿಕಲ್ಪನೆಯಂತೆ ಚರ್ಚ್ ಸ್ಟ್ರೀಟ್‌ನಲ್ಲಿ ವಾಯುಮಾಲಿನ್ಯ ಕಡಿಮೆಯಾಗಿ ಗಾಳಿಯ ಗುಣಮಟ್ಟ ಹೆಚ್ಚಿದರೆ ಅದನ್ನು ಇತರೆ ಪ್ರಮುಖ ಬೀದಿಗಳಿಗೂ ಅಳವಡಿಸಲು ನಗರ ಭೂ ಸಾರಿಗೆ ನಿರ್ದೇಶನಾಲಯವು ನಿರ್ಧರಿಸಿ ವಾರಾಂತ್ಯದಲ್ಲಿ ಚರ್ಚ್ ಸ್ಟ್ರೀಟ್‌ನಲ್ಲಿ ಸಂಚಾರವನ್ನು ನವೆಂಬರ್-2020 ರಿಂದ ಫೆಬ್ರವರಿ-2021 ರ ಅಂತ್ಯದವರೆಗೆ ನಿಗದಿತ ಸಮಯದಲ್ಲಿ ನಿರ್ಬಂಧಿಸಿ ಪಾದಚಾರಿಗಳಿಗೆ ಮಾತ್ರ ಚರ್ಚ್ ಸ್ಟ್ರೀಟ್ ರಸ್ತೆಯನ್ನು ಮುಡುಪಾಗಿಡಲು ಕೋರಿ ಆಯುಕ್ತರು ಮತ್ತು ಸರ್ಕಾರದ ಪದನಿಮಿತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ನಗರ ಭೂಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

Scanned with CamScanner

ಮೇಲ್ಕಂಡ ಅವಧಿಯಲ್ಲಿ, ಸುರಕ್ಷಿತ ಮತ್ತು ಹಸಿರು ಮತ್ತು ಸಕ್ರಿಯ ಸಾರಿಗೆ ರೂಪಗಳಿಗೆ ಆದ್ಯತೆ ನೀಡುವ ಆರೋಗ್ಯಕರ ಮತ್ತು ನಾಗರೀಕ-ಕೇಂದ್ರಿತ ರಸ್ತೆ ಪರಿಸರವನ್ನು ಶಕ್ತಗೊಳಿಸುವ ಸಂಸ್ಥೆಗಳು ಮತ್ತು ಉಪಕ್ರಮಗಳಿಗೆ ಉತ್ತೇಜಿಸುವ ಸಲುವಾಗಿ ಹಾಗೂ ಚರ್ಚ್ ಸ್ಟ್ರೀಟ್ ಅನ್ನು ಶುದ್ಧ ಗಾಳಿಯ ಅವಿಷ್ಕಾರಗಳಿಗಾಗಿ ಪ್ರದರ್ಶನ ಪ್ರದೇಶವಾಗಿ ಪರಿವರ್ತಿಸಲು ನಗರ ಭೂಸಾರಿಗೆ ನಿರ್ದೇಶನಾಲಯವು ಹಮ್ಮಿಕೊಂಡಿರುವ ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಮೇಲ್ಕಂಡ ಅವಧಿಗೆ ಚರ್ಚ್ ಸ್ಟ್ರೀಟ್‌ನಲ್ಲಿ ವಾರಂತ್ಯ ದಿನಗಳಲ್ಲಿ ನಿಗದಿತ ವೇಳೆಯಲ್ಲಿ ಸಂಚಾರವನ್ನು ನಿರ್ಬಂಧಿಸಿ ಪಾದಚಾರಿಗಳಿಗೆ ಮಾತ್ರ ರಸ್ತೆ ಸೀಮಿತಗೊಳಿಸುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ ಕಲಂ 115 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960 ರ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಮಲ್ ಪಂತ್, ಐಪಿಎಸ್, ಪೊಲೀಸ್ ಕಮೀಷನರ್, ಬೆಂಗಳೂರು ನಗರ ಆದ ನಾನು ಚರ್ಚ್ ಸ್ಟ್ರೀಟ್ ಅನ್ನು ವಾರಂತ್ಯ ದಿನಗಳಲ್ಲಿ ಪಾದಚಾರಿಗಳಿಗೆ ಮಾತ್ರ ರಸ್ತೆ ಸೀಮಿತ ಸಂಬಂಧ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

**ಚರ್ಚ್ ಸ್ಟ್ರೀಟ್:**

- ದಿನಾಂಕ: 07-11-2020 ರಿಂದ 2021ರ ಫೆಬ್ರವರಿ ಮಾಹೆಯ ಅಂತ್ಯದವರೆಗೆ ಪ್ರತಿ ವಾರಾಂತ್ಯದಲ್ಲಿ ಅಂದರೆ ಶನಿವಾರ ಮತ್ತು ಭಾನುವಾರಗಳಂದು ಈ ಕೆಳಕಂಡ ದಿನಾಂಕಗಳಲ್ಲಿ;

| ಮಾಹೆ | ದಿನಾಂಕ |
|---|---|
| ನವೆಂಬರ್-2020 | 07-11-2020, 08-11-2020, 14-11-2020, 15-11-2020, 21-11-2020, 22-11-2020, 28-11-2020, 29-11-2020 |
| ಡಿಸೆಂಬರ್-2020 | 05-12-2020, 06-12-2020, 12-12-2020, 13-12-2020, 19-12-2020, 20-12-2020, 26-12-2020, 27-12-2020, |
| ಜನವರಿ-2021 | 02-01-2021, 03-01-2021, 09-01-2021, 10-01-2021 16-01-2021, 17-01-2021, 23-01-2021, 24-01-2021 30-01-2021, 31-01-2021 |
| ಫೆಬ್ರವರಿ-2021 | 06-02-2021, 07-02-2021, 13-02-2021, 14-02-2021 20-02-2021, 21-02-2021, 27-02-2021, 28-02-2021 |

ಬೆಳಿಗ್ಗೆ 10:00 ಗಂಟೆಯಿಂದ ಮಧ್ಯರಾತ್ರಿ 12:00 ಗಂಟೆಯವರೆಗೆ ಚರ್ಚ್ ಸ್ಟ್ರೀಟ್‌ನಲ್ಲಿ ಎಲ್ಲಾ ತರಹದ ವಾಹನ ಸಂಚಾರವನ್ನು ನಿಷೇಧಿಸಿ ಈ ಸಮಯಗಳಲ್ಲಿ ಚರ್ಚ್ ಸ್ಟ್ರೀಟನ್ನು ಪಾದಚಾರಿಗಳಿಗೆ ಮಾತ್ರ ರಸ್ತೆ ಎಂದು ಮಡುಪಾಗಿಡಲಾಗಿದೆ.

Scanned with CamScanner

- ಚರ್ಚ್ ಸ್ಟ್ರೀಟ್ ರಸ್ತೆಯ ನಿವಾಸಿಗಳಿಗೆ ರೆಸ್ಟ್ ಹೌಸ್ ರಸ್ತೆ ಮತ್ತು ಎಂ.ಜಿ. ರಸ್ತೆಯ ಟೈಮ್ಸ್ ಆಫ್ ಇಂಡಿಯಾ ಕಡೆಯ ರಸ್ತೆ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಪ್ರವೇಶಿಸಲು ಮತ್ತು ನಿರ್ಗಮಿಸಲು ಅವಕಾಶ ಕಲ್ಪಿಸಿದೆ.

ಅಂತೆಯೇ ಕಲಂ 116 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ 4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡಂತೆ ಮಾಡಲಾದ ವ್ಯವಸ್ಥೆಯನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಅಧಿಕಾರಿಗಳಿಗೆ ಆದೇಶಿಸಿರುತ್ತೇನೆ.

ಮೇಲ್ಕಂಡ ವ್ಯವಸ್ಥೆಯು ದಿನಾಂಕ: 07-11-2020 ರಿಂದ ದಿನಾಂಕ: 28-02-2021 ರವರೆಗೆ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

ಈ ಆದೇಶವನ್ನು ನಾನು ಈ ದಿವಸ ಅಂದರೆ ದಿನಾಂಕ: 03-11-2020 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಿರುತ್ತೇನೆ.

3/11

(ಕಮಲ್ ಪಂತ್)
ಪೊಲೀಸ್ ಕಮೀಷನರ್,
ಬೆಂಗಳೂರು ನಗರ.

ಕಮಲ್ ಪಂತ್ ಭಾ.ಪೊ.ಸೇ.
ಪೊಲೀಸ್ ಆಯುಕ್ತರು
ಬೆಂಗಳೂರು ನಗರ

ಗೆ,

1. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಸರ್ಕಾರಿ ಹೊರವಲಯ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು. ರವರಿಗೆ ಕಳುಹಿಸಿದ್ದು, ಇದನ್ನು ರಾಜ್ಯ ಪತ್ರದಲ್ಲಿ ಪ್ರಕಟಣೆಗೊಳಿಸಲು ಕೋರಲಾಗಿದೆ.
2. ಸಂಬಂಧಪಟ್ಟವರಿಗೆ

Scanned with CamScanner